# ಎಡಿಆರ್ ಕೇಂದ್ರಕ್ಕೆ ಚಾಲನೆ

ಬೆಂಗಳೂರು: ನ್ಯಾಯಾಲಯದ ನೆರವಿನ ಹೊರತಾಗಿಯೂ ವಿವಾದಗಳನ್ನು ಬಗೆಹರಿಸಲು ಸಾರ್ವಜನಿಕರನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸಿಎಂಆರ್ ಕಾನೂನು ವಿದ್ಯಾಲಯ ಬೆಂಗಳೂರಿನಲ್ಲಿ ಪರ್ಯಾಯ ವಿವಾದ ಇತ್ಯರ್ಥ ಕೇಂದ್ರ (ಎಡಿಆರ್)ವನ್ನು ಪ್ರಾರಂಭಿಸಿದೆ. ಎಡಿಆರ್ ಕೇಂದ್ರವನ್ನು ಉದ್ಘಾಟಿಸಿ ಬಳಿಕ ನ್ಯಾಯಮೂರ್ತಿ ಶಂಕರ್ ಗಣಪತಿ ಪಂಡಿತ್ ಮಾತನಾಡಿ, ಕಳೆದ ವರ್ಷದವರೆಗೂ ದೇಶದ ವಿವಿಧ ನ್ಯಾಯಾಲಯಗಳಲ್ಲಿ 4 ಕೋಟಿ ಪ್ರಕರಣಗಳು ಬಾಕಿಯಿದ್ದು ನ್ಯಾಯಾಧೀಶರ ಕೊರತೆಯೂ ಇದಕ್ಕೆ ಕಾರಣವಾಗಿದೆ. ಎಡಿಆರ್ ಕೇಂದ್ರವನ್ನು ಎಡಿಆರ್ ಚಟುವಟಿಕೆಗಳ ವಿದ್ಯಾರ್ಥಿ ಸಮಿತಿಗೆ ವಹಿಸಿರುವುದು ಅತ್ಯುತ್ತಮವಾದ ಉಪಕ್ರಮವಾಗಿದೆ. ಈ ಪ್ರಯತ್ನದಲ್ಲಿ ಅವರಿಗೆ ಯಶಸ್ಸು ದೊರೆಯಲಿ ಎಂದು ಹಾರೈಸುತ್ತೇನೆ ಎಂದರು. ವಿಶ್ರಾಂತ ನ್ಯಾಯಾಧೀಶ ನ್ಯಾಯಮೂರ್ತಿ ಬೂದಿಹಾಳ್ ಆರ್.ಬಿ ಮತ್ತಿತರರಿದ್ದರು.